# ಮಕ್ಕಳ ಕೈ ಚಂದ್ರನತ್ತ

**ಮಕ್ಕಳ ಪ್ರಶ್ನೆಗಳು ದೊಡ್ಡವರಿಗೆ ಕಿರಿಕಿರಿ ಹುಟ್ಟಿಸಬಹುದು. ಆದರೆ, ನಾವು ಸರಿಯಾಗಿ ಉತ್ತರಿಸದೆ ಹೋದರೆ ಮಕ್ಕಳ ಗ್ರಹಿಕೆಯ ವಿಧಾನವೇ ಸಂಕುಚಿತಗೊಳ್ಳಬಹುದು. ಮಕ್ಕಳೊಂದಿಗಿನ ಸಂವಹನ ಅವರಿಗೆ ಕಲಿಸುವುದಷ್ಟೇ ಆಗಿರುವುದಿಲ್ಲ; ನಾವು ಕಲಿಯುವುದೂ ಆಗಿರುತ್ತದೆ.**

■ ಸ್ವಯಂಪ್ರಭಾ



ಮಕ್ಕಳಿಗೆ ಕೆಲವು ಸಾಮರ್ಥ್ಯಗಳನ್ನು ದೇವರು ಜನ್ಮದತ್ತವಾಗಿ ಕರುಣಿಸಿರುತ್ತಾರೆ. ಆ ಸಾಮರ್ಥ್ಯಗಳನ್ನು ಗುರ್ತಿಸಿ, ಪೋಷಿಸುವ ಜವಾಬ್ದಾರಿಯಷ್ಟೇ ಅಪ್ಪ ಅಮ್ಮನದ್ದು.

ಮಕ್ಕಳಲ್ಲಿ ಎಳವೆಯಲ್ಲಿ ಏಕಾಗ್ರತೆಯ ಪ್ರಮಾಣ ಸಾಮಾನ್ಯವಾಗಿ ಚೆನ್ನಾಗಿಯೇ ಇರುತ್ತದೆ. ಆದ್ದರಿಂದಲೇ ಅವರು ಸುತ್ತಲಿನ ವಸ್ತುಗಳನ್ನು ಅವಲೋಕಿಸುತ್ತ, ಪ್ರತಿಯೊಂದು ವಸ್ತುವಿಗೂ 'ಇದೇನು?', 'ಇದು ಹೇಗೆ?' ಎಂಬ ಪ್ರಶ್ನೆಗಳನ್ನು ನಿರಂತರ ಕೇಳುತ್ತ ಕಲಿಯುತ್ತ ಇರುತ್ತಾರೆ. ತಮಗೆ ಗೊತ್ತಿಲ್ಲದ ವಿಷಯಗಳನ್ನು ಪ್ರಾಮಾಣಿಕವಾಗಿ ಕೇಳುತ್ತ, ಉತ್ತರ ಪಡೆಯುತ್ತ ಬೆಳೆಯುತ್ತಾರೆ. ಆಟಗಳಲ್ಲಿ ಮಕ್ಕಳು ತಲ್ಲೀನರಾಗುವ ಪರಿಯನ್ನು ನೋಡಿದರೆ, ಏಕಾಗ್ರತೆ ಎಂಬುದು ಅವರಲ್ಲಿ ಎಷ್ಟೊಂದು ಬಿಗುವಾಗಿ ಇರುತ್ತದೆ ಎನ್ನುವುದು ಗೊತ್ತಾಗುತ್ತದೆ.

ಮಕ್ಕಳ ಏಕಾಗ್ರತೆಗೆ ಭಂಗ ತರುವ ವಿಷಯಗಳು ಹಲವು ಇರಬಹುದು. ಆ ಪೈಕಿ ದೊಡ್ಡವರು ನೀಡುವ ಲಘು ಉಪಮೆಗಳು ಮಕ್ಕಳ ಏಕಾಗ್ರತೆಯನ್ನು ಚಂಚಲಗೊಳಿಸುತ್ತವೆ. ಮೊನ್ನೆ ಮೂರನೇ ಕ್ಲಾಸ್‌ನಲ್ಲಿ ಓದುವ ಸಾತ್ವಿಕ್ ತನ್ನ ಅಮ್ಮನ ಬಳಿ ಒಂದು ಪ್ರಶ್ನೆ ಕೇಳಿದ. 'ಅಮ್ಮ, ಎಮ್ಮೆಗಳು ಎಲ್ಲಿ ಮೇಯುತ್ತವಮ್ಮಾ?'. ಅಮ್ಮನಿಗೆ ಅಚ್ಚರಿ.

'ನಮ್ಮೂರಿಗೆ ಹೋದಾಗ ಎಮ್ಮೆ ಮೇಯುವುದನ್ನು ತೋರಿಸುತ್ತೇನೆ ಕಂದಾ' ಎಂದು ಉತ್ತರಿಸಿದರು. 'ಯಾಕೆ ಹೀಗೆ ಕೇಳುತ್ತೀ' ಎಂದು ಅಮ್ಮ ಕೇಳಿದ ಪ್ರಶ್ನೆಗೆ ಸಾತ್ವಿಕ್ ಹೇಳಿದ್ದು ಹೀಗೆ: 'ನನಗೆ ಕ್ಲಾಸ್‌ನಲ್ಲಿ ಎಮ್ಮೆ ಮೇಯಿಸುವುದು ಹೇಗೆ ಎನ್ನುವುದೇ ಮನಸ್ಸಿನಲ್ಲಿ ಕಾಡುತ್ತದೆ. ಮೇಷ್ಟ್ರು ಪಾಠ ಮಾಡುವುದು ಏನೂ ಕಿವಿಗೇ ಬೀಳುವುದಿಲ್ಲ'

ಮಗನ ಪ್ರಶ್ನೆಯ ಹಿಂದೆ ಯಾವ ವಿಚಾರ ಅಡಗಿರಬಹುದು ಎಂದು ಚುರುಕುಮತಿಯ ಅಮ್ಮ ಗ್ರಹಿಸಿದರು. ಬಹುಶಃ ಯಾವುದೋ ಕಲಿಕೆಯನ್ನು ಸರಿಯಾಗಿ ಮಾಡದ ಸಾತ್ವಿಕ್‌ಗೆ ಮೇಷ್ಟ್ರು, 'ನೀನು ಎಮ್ಮೆ ಮೇಯಿಸಲು ಹೋಗು' ಎಂದು ದಬಾಯಿಸಿರಬಹುದು. ನಗರ ಜೀವನವನ್ನು ನೋಡಿದ ಸಾತ್ವಿಕ್‌ನ ಕುತೂಹಲದ ಮನಸ್ಸಿನಲ್ಲಿ 'ಎಮ್ಮೆ ಮೇಯಿಸುವುದು ಹೇಗಿರುತ್ತದೆ' ಎಂಬ ವಿಚಾರವೇ ಸುತ್ತಿ ಸುಳಿದಾಡಲು ಶುರುವಾಗಿದೆ. ಹಾಗಾಗಿ, ಪಾಠ ಕೇಳಲು ಸಾಧ್ಯವಾಗುತ್ತಿಲ್ಲ.

ಜಗತ್ತನ್ನು ಮಕ್ಕಳೂ ದೊಡ್ಡವರೂ ಉದಾಹರಣೆಗಳ ಮೂಲಕವೇ ಅರ್ಥ ಮಾಡಿಕೊಳ್ಳುತ್ತಾರೆ. ಚಂದ್ರನು ನಿಜವಾಗಿಯೂ ಹೇಗಿರುತ್ತಾನೋ ಗೊತ್ತಿಲ್ಲ. ಆದರೆ ಇಲ್ಲಿಂದ ನೋಡುವಾಗ, ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತಾನೆ. ನಾಲ್ಕು ವರ್ಷದ ಸುಹಾನಿ ಪುಟ್ಟಿ ಗೋಡಂಬಿಯನ್ನು ನೋಡಿದ ಕೂಡಲೇ 'ಮೂ..ನ್' ಎಂದು ಉದ್ಗರಿಸುತ್ತಾಳೆ. ಬಿದಿಗೆಯಿಂದ ಸಾಧಾರಣ ಷಷ್ಠಿ ತಿಥಿಯವರೆಗಿನ ಚಂದ್ರಬಿಂಬವು ಅವಳ ಕಣ್ಣಲ್ಲಿ ಕುಳಿತಿದೆ. ಹಾಗಾಗಿ ಹೋಳಾದ ಗೋಡಂಬಿ ಅವಳಿಗೆ ಚಂದ್ರನಂತೆ ಕಂಡಿರಬಹುದು. ಪೌರ್ಣಮಿಯ ಚಂದ್ರನನ್ನು ನೋಡಿದರೆ, ಬೆಳ್ಳಿಯ ಬಟ್ಟಲಿನಂತೆ ಗೋಚರಿಸುತ್ತಾನೆ. ಬೆಳ್ಳಿಯ ಬಟ್ಟಲು ಹೇಗಿರುತ್ತದೆ ಎಂಬ ಕುತೂಹಲವೂ ಮೊದಲ ಬಾರಿಗೆ ಮಗುವಿನ ಮನಸ್ಸಿನಲ್ಲಿ ಮೂಡಬಹುದು. ಮಗು ತನಗೆ ಗೊತ್ತಿರುವ ಚಿತ್ರವನ್ನೇ ಆಯ್ಕೆ ಮಾಡಿ ಹೋಲಿಕೆಗಳನ್ನು ಮಾಡುತ್ತದೆ. ಗೊತ್ತಿರುವ ಚಿತ್ರಗಳೆಂದರೆ, ಅವು ಪೋಷಕರು ತಮ್ಮ ಮಕ್ಕಳಿಗಾಗಿ ಒದಗಿಸಿದ ವಾತಾವರಣದಿಂದಲೇ ಲಭಿಸುತ್ತದೆ. ಮಕ್ಕಳಿಗೆ ಗದ್ದೆ ಬಯಲು, ಗುಡ್ಡ ಕಾಡು ಎಂಬೆಲ್ಲ ವಿಶಾಲವಾದ ಪ್ರದೇಶದಲ್ಲಿ ಓಡಾಟದ ಅವಕಾಶಗಳು ಕಡಿಮೆ ಇರುವ ಈ ಕಾಲದಲ್ಲಿ, ಹಿರಿಯರ ಮಾತುಗಳೇ ಹೆಚ್ಚು ಪರಿಣಾಮಕಾರಿ. ಹಾಗಾಗಿ ಒರಟಾದ ಮಾತುಗಳನ್ನು ದೊಡ್ಡವರೇ ನಿಷೇಧಿಸಿಕೊಳ್ಳಬೇಕಷ್ಟೆ.

ಶ್ಲೋಕ ಕಲಿಯುವಾಗ ಶ್ರೇಯಾಗೂ ಇಂತಹುದೇ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡುತ್ತವೆ. ಸಂಸ್ಕೃತದ ಎಷ್ಟೋ ಪದಗಳಿಗೆ ಅಮ್ಮ ಅರ್ಥ ಹೇಳಿದರೂ ಅವಳ ಮನಸ್ಸಿನಲ್ಲಿ ಹೆಚ್ಚು ಹೊತ್ತು ಉಳಿಯುವುದಿಲ್ಲ. ಅಂತಹ ಪದಗಳನ್ನು ಹೋಲುವ ಮತ್ತೊಂದು ಪದ ಮನಸ್ಸಿಗೆ ಬಂದು ಕೂರುತ್ತದೆ. ಆದರೆ ಅದನ್ನು ಸ್ಪಷ್ಟವಾಗಿ ಅಮ್ಮನಲ್ಲಿ ಹೇಳಲಾರಳು. ಅದಕ್ಕಾಗಿ ಪದೇ ಪದೇ ಅಮ್ಮನ ಬಳಿ ಪ್ರಶ್ನೆಗಳನ್ನು ಕೇಳುತ್ತ ತನ್ನನ್ನು ತಾನು ಸರಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ಅಮ್ಮನಿಗೋ, ಇವಳೇಕೆ ಇಷ್ಟೊಂದು ಪ್ರಶ್ನೆ ಕೇಳುತ್ತಾಳೆ ಎಂಬ ಅಸಹನೆ.

ಚಿಕ್ಕಪ್ಪನಿಗೆ ಮದುವೆಗಾಗಿ ವಧು ಅನ್ವೇಷಣೆ ನಡೆಯುತ್ತಿತ್ತು. ಹುಡುಗಿಯ ಫೋಟೊ ನೋಡಿದ ಅಮ್ಮ, 'ಈಕೆಯ ಮುಖ ಸುಟ್ಟ ರಾಗಿ ರೊಟ್ಟಿಯಂತಿದೆ' ಎಂದುಬಿಟ್ಟರು. ಪುಟಾಣಿ ಪರೇಶ್‌ಗೆ ಸುಟ್ಟ ರಾಗಿ ರೊಟ್ಟಿಯನ್ನು ಹಾಗೂ ಕಪ್ಪು ಬಣ್ಣದವರ ಮುಖವನ್ನೂ ಕಲ್ಪಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಆದರೆ ಇಂತಹುದೊಂದು ಹೋಲಿಕೆಯ ಚಿತ್ರ ಮಗುವಿನ ಮನಸ್ಸಿಗೆ ನಿಜವಾಗಿಯೂ ಬೇಕಿತ್ತೇ?

ದೊಡ್ಡವರು ದೈನಂದಿನ ಮಾತುಕತೆಗಳಲ್ಲಿ ಬಳಸುವ ಗಾದೆಗಳು, ಹೋಲಿಕೆಗಳು, ಇತರರ ಬಗ್ಗೆ ಮಾತನಾಡುವ ವಿಚಾರಗಳು ಎಲ್ಲವೂ ಮಕ್ಕಳ ಮನಸ್ಸಿನಲ್ಲಿ ಒಂದಲ್ಲ ಒಂದು ರೀತಿಯ ಪರಿಣಾಮ ಬೀರುತ್ತವೆ. ಮಕ್ಕಳು ತಾವು ಏಕಾಗ್ರ ಚಿತ್ತದಿಂದ ಗ್ರಹಿಸಿದ ಚಿತ್ರಗಳು ದೊಡ್ಡವರ ಮಾತಿನಿಂದಾಗಿ ಕಲಸಿ ಹೋದಂತೆ ಆಗಬಹುದು, ಅಥವಾ ಅವರಿಗೆ ತಪ್ಪು ಮಾದರಿಗಳನ್ನು ನೀಡಬಹುದು. ಹಾಗೆಯೇ ದೊಡ್ಡವರು ಬಳಸುವ ಸಕಾರಾತ್ಮಕ ಹೋಲಿಕೆಗಳು, ಅವರಲ್ಲಿ ಸಕಾರಾತ್ಮಕ ಚಿತ್ರಗಳನ್ನೂ ಮೂಡಿಸಬಹುದು. ■